ತಕೊಂಡೋಗಿ... ಸುಗುಂಟ್ಲು. ಮಗೀಗೆ ತಿನ್ಸಿ' ಎಂದು ನುಡಿದು ಮಗನ ಕೈಗಿತ್ತಳು. ನಂತರ ಐನೂರರ ನೋಟೊಂದನ್ನು ಮೊಮ್ಮಗಳ ಕೈಗೆ ಕೊಡಲು ಹೋದಳು. ಅವಳು ತಾಯಿಯ ಸೀರೆಯನ್ನು ಅಪ್ಪಿಕೊಂಡಳು. ಮತ್ತೆ ಆ ನೋಟನ್ನು ಮಗನ ಕೈಗಿತ್ತು, 'ಟೌನಾಕೆ ರಾಮಯ್ಯನ ಅಂಗ್ಡೀಕೆ ಕಲ್ಡೆ ಬೀಜ ಕೊಡ್ಸು' ಎಂದಳು. ಅವನು ಆಯ್ತು ಎನ್ನುವಂತೆ ನೋಟನ್ನು ತೆಗೆದುಕೊಂಡ. ನಂಜಮ್ಮ ಮತ್ತೆ ಮೊಮ್ಮಗಳ ಬಳಿಗೆ ನಡೆದು, 'ಮಗ್ಳೆ, ಒಂದೇ ಒಂದ್ ಮಾತಾಡೆ... ಒಂದ್ ಮಾತು. ಈ ಗಯ್ಯಾಳೀಕೆ ನಿನ್ ಬಾಯಿಂದ ಎಂತಾ ಮಾತ್ ಬರುತ್ತ್ವೋಂತ ಕೇಳೋ ಆಸೆ... ಮಾತಾಡ್ ಮಗ್ಳೆ' ಎಂದು ಕೇಳತೊಡಗಿದಳು. ಅದು ಗಾಬರಿಯಲ್ಲಿ ತಾಯಿಯನ್ನು ಮತ್ತಷ್ಟು ಅಪ್ಪಿಕೊಂಡಿತು.



ಅಲ್ಲೆ ಇದ್ದ ನಾಗರಾಜ, 'ನಂಜಕ್ಕೊ ನಿನ್ನ ಮೊಮ್ಮಗಳ್ಗೆ ಮಾತು ಬರಾಕಿಲ್ಲ, ಕಿವೀನೂ ಕೇಳಾಕಿಲ್ಲ.' ಎಂದು ನುಡಿದ. ಅವಳು ಮಗನ ಕಡೆಗೆ ನೋಡಿದಳು. ಅವನು ತಲೆ ತಗ್ಗಿಸಿ ನಿಂತಿದ್ದ. ಮತ್ತೆ ಸೊಸೆಯ ಕಡೆಗೆ ನೋಡಿದಳು. ಅವಳ ಕಣ್ಣಂಚಿಗೆ ನೀರು ಜಿನುಗುತ್ತಿತ್ತು. ನಂಜಮ್ಮನಿಗೆ ಮಾತು ಬಾರದಾಗಿ ಅಲ್ಲೆ ನಿಂತುಬಿಟ್ಟಳು. ಮಗ ಹೊರಡ್ತೀವಿ ಎಂದದ್ದು ಅವಳಿಗೆ ಕೇಳಿಸಲಿಲ್ಲ. ಅವರು ಕಾರು ಸ್ಟಾರ್ಟ್ ಮಾಡಿ ಹೊರಟುಹೋದ ಮೇಲೆ ಬಹಳ ಹೊತ್ತು ಗರ ಬಡಿದವಳಂತೆ ಅಲ್ಲೆ ನಿಂತೆ ಇದ್ದಳು. ಮತ್ತೆ ಅಲ್ಲಿಂದ ನಿಧಾನಕ್ಕೆ ಮನೆಯೊಳಗೆ ಹೋಗಿ ಕದ ಹಾಕಿಕೊಂಡಳು. ರಾತ್ರಿ ಸುಮಾರು ಒಂಬತ್ತು ಗಂಟೆಯ ಹಾಗೆ ಆಚೆ ಬಂದ ಅವಳು ಹೊಸ್ತಿಲ ಬಳಿ ಕುಳಿತು ಆಕಾಶದ ಕಡೆ ಕೈ ತೋರಿಸುತ್ತ, 'ಲೇ ಲೋಫರ್ ನನ್ಮಗ್ನೆ, ಯಾವಾಕ್ಲು ನಿಂಕೆ ನಾನೆ ಬೇಕ. ಆಡು ಅದೇಷ್ಟ್ ಆಟ ಆಡ್ತೀಯೊ ಆಡು. ನಿನ್ ಕಾಲು ಕತ್ತರಿಸ. ನಿನ್ ನಾಲ್ಗೇಲಿ ಹುಳ ಬೀಳ. ನಿನ್ ಬಾಯಿಗೆ ಮಣ್ಣಾಕ. ನಾನ್ ಸಾಲ್ದು ಅಂತ ಆ ಎಳಿ ಮಗೂ ಮೇಕೂ ಕಣ್ಣಾಕ್ದ... ನಿನ್ ಕಣ್ಗೆ ಕಾರದ್ ಪುಡಿ ಹಾಕ. ಏಮೇಮ್ ಆಟ್ಲು ಆಡ್ತಾವ್ರ ಕೊಡಕ...' ಹೀಗೆ ಸುಮಾರು ಅರ್ಧ ಗಂಟೆಗೂ ಹೆಚ್ಚು ಬಯ್ದು ಮತ್ತೆ ಸುಮ್ಮನೆ ಚಂದಿರನ ಬೆಳಕಿನಡಿಯಲ್ಲಿ ತಣ್ಣಗೆ ಗೋಡೆಗೊರಗಿ ಕುಳಿತಳು. ಬೆಳದಿಂಗಳ ಹೊತ್ತ ಗಾಳಿ ಅವಳಿಗೆ ಹಾಲೂಡಿಸುವ ತೆರದಿ